ಸಮಸ್ತ ಕನ್ನಡಿಗರ ವಿಶ್ವಾಸ ಸಂಜೆ ದಿನಪತ್ರಿಕೆ

ಈ ಸಂಜೆ

**6th International Conference at RV College of Engineering**
**Friday 23rd December 2022, Page No.07**

ಈ ಸಂಜೆ

# ತಂತ್ರಜ್ಞಾನ ಸಮಸ್ಯೆಗಳ ಪರಿಹಾರಕ್ಕೆ ಮುಂದಾಗಿ



**ಕೆಂಗೇರಿ, ಡಿ.23-** ಕೈಗಾರಿಕಾ ತಜ್ಞರ ಅನುಭವಗಳನ್ನು ಸಮರ್ಪಕವಾಗಿ ಬಳಸಿಕೊಂಡು ಅವರ ಜ್ಞಾನದ ತಿಳುವಳಿಕೆ ಹಂಚಿಕೊಂಡು ಕೈಗಾರಿಕಾ ಕ್ಷೇತ್ರದಲ್ಲಿ ಎದುರಾಗುವ ತಂತ್ರಜ್ಞಾನದ ಸಮಸ್ಯೆಗಳ ಪರಿಹಾರಕ್ಕೆ ಮುಂದಾಗಬೇಕೆಂದು ವಿದ್ಯಾರ್ಥಿಗಳಿಗೆ ಗ್ಲೋಬಲ್ ಫೌಂಡರೀಸ್ ಕಂಪೆನಿಯ ಕಾರ್ಯ ನಿರ್ವಹಣಾಧಿಕಾರಿ ಡಾ. ದಿವೇಶ್ ದೀವೇದಿ ಸಲಹೆ ನೀಡಿದರು.

ಬೆಂಗಳೂರು- ಮೈಸೂರು ಮುಖ್ಯರಸ್ತೆಯ ರಾವಿ ತಾಂತ್ರಿಕ ಮಹಾವಿದ್ಯಾಲಯ ಹಾಗೂ ಅಮೆರಿಕಾದ ಮಿಯಾಮಿ ಫ್ಲೋರಿಡಾ ಅಂತಾರಾಷ್ಟ್ರೀಯ ವಿಶ್ವವಿದ್ಯಾಲಯ ಸಹಯೋಗದಲ್ಲಿ ಗಣಕಯಂತ್ರ ವ್ಯವಸ್ಥೆ ಮತ್ತು ಮಾಹಿತಿ ತಂತ್ರಜ್ಞಾನ ಸಮಸ್ಯೆಗಳ ಸುಸ್ಥಿರ ಪರಿಹಾರದ ಕುರಿತು ಆಯೋಜಿಸಿದ್ದ (ಸಿಎಸ್ ಐಟಿಎಸ್‌ಎಸ್-2022) 6ನೇ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಪಾಲ್ಗೊಂಡು ಮಾತನಾಡಿದರು.

ವಿದ್ಯಾರ್ಥಿಗಳು ಪದವಿ ಕಲಿಕಾ ಸಂದರ್ಭದಲ್ಲಿಯೇ ಅವರಿಗೆ ತಂತ್ರಜ್ಞಾನದ ಆವಿಷ್ಕಾರಕ್ಕಾಗಿ ಸಂಶೋಧನೆ ಕೈಗೊಳ್ಳಲು ಅಗತ್ಯ ಸೌಲಭ್ಯ, ಉತ್ತಮ ಪರಿಸರ ನಿರ್ಮಾಣ ಹಾಗೂ ಸಹಕಾರ ನೀಡಲು ಆಡಳಿತ ಮಂಡಳಿ ಆಸಕ್ತಿ ವಹಿಸಿರುವುದು ಉತ್ತಮ ಬೆಳವಣಿಗೆಯಾಗಿದ್ದು, ನಮ್ಮ ಸಂಸ್ಥೆಯೂ ಅಗತ್ಯ ನೆರವು, ಸಹಕಾರ ನೀಡಿ ಪ್ರೋತ್ಸಾಹಿಸಲು ಉದ್ದೇಶ ಹೊಂದಿದೆ ಎಂದರು.

ಕೈಗಾರಿಕೆಗಳು ಹಾಗೂ ಶೈಕ್ಷಣಿಕ ಕೇಂದ್ರಗಳು ಒಂದಕ್ಕೊಂದು ಪೂರಕವಾಗಿ ತಂತಜ್ಞಾದ ಅರಿವು ಹಂಚಿಕೊಂಡು ತಾಂತ್ರಿಕ ಪರಿಣತಿ ಸಾಧಿಸುವ ಮೂಲಕ ಕಾರ್ಯ ಕ್ಷಮತೆ ಹೆಚ್ಚಿಸಿಕೊಳ್ಳಬಹುದಾಗಿದೆ ಎಂದು ಹೇಳಿದರು.

ಅಮೆರಿಕಾದ ಮಿಯಾಮಿ ಫ್ಲೋರಿಡಾ ಅಂತಾರಾಷ್ಟ್ರೀಯ ವಿಶ್ವವಿದ್ಯಾಲಯ ಪ್ರೊ. ಎಸ್.ಎಸ್. ಅಯ್ಯಂಗಾರ್ ಮಾತನಾಡಿ, ಆರ್‌ವಿ ಕಾಲೇಜು ಆಡಳಿತ ಮಂಡಳಿಯ ಸಹಕಾರ ಮತ್ತು ಪ್ರೋತ್ಸಾಹದಿಂದ ಸಿಬ್ಬಂದಿ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳು ಸಂಶೋಧನೆ ಕೈಗೊಂಡು ತಂತ್ರಜ್ಞಾನದ ಆವಿಷ್ಕಾರದ ಮೂಲಕ ಜಾಗತಿಕ ಸಮಸ್ಯೆಗಳ ಪರಿಹಾರಕ್ಕೆ ಮುಂದಾಗಿರುವುದು ಉತ್ತಮ ಬೆಳವಣಿಯಾಗಿದೆ ಎಂದು ಶ್ಲಾಘಿಸಿದರು.

ಐಬಿಎಂ ರಿಸರ್ಚ್ ಇಂಡಿಯಾ ವಿಭಾಗದ ಡಾ.ಎಲ್. ವೆಂಕಟ ಸುಬ್ರಹ್ಮಣ್ಯಂ ಮಾತನಾಡಿ, ತಂತ್ರಜ್ಞಾನ ಕ್ಷೇತ್ರದಲ್ಲಿ ಯುವ ಎಂಜಿನಿಯರ್ ಗಳಿಗೆ ಉತ್ತಮ ಅವಕಾಶವಿದ್ದು, ತಂತ್ರಜ್ಞಾನದ ಸವಾಲುಗಳಿಗೆ ಪರಿಣತರ ಮಾರ್ಗ ದರ್ಶನದೊಂದಿಗೆ ಕಾರ್ಯ ನಿರ್ವಹಿಸಿ ಸಂಶೋಧನೆಗಳ ಮೂಲಕ ಸಂಕೀರ್ಣ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯುವ ಮೂಲಕ ತಂತ್ರಜ್ಞಾನ ಕ್ಷೇತ್ರದಲ್ಲಿ ಉಜ್ವಲ ಭವಿಷ್ಯ ರೂಪಿಸಿಕೊಳ್ಳಬಹುದಾಗಿದೆ ಎಂದರು.

ರಾಷ್ಟ್ರೀಯ ಶಿಕ್ಷಣ ಸಮಿತಿ ಟ್ರಸ್ಟ್ ಅಧ್ಯಕ್ಷ ಡಾ.ಎಂ.ಪಿ.ಶ್ಯಾಮ್ ಮಾತನಾಡಿ, ಗಣಕ ತಂತ್ರಜ್ಞಾನದ ಮೂಲಕ ಪರಿಸರ ಸಮಸ್ಯೆಯೂ ಸೇರಿದಂತೆ ಅನೇಕ ಸಾಮಾಜಿಕ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಒದಗಿಸಬಹುದಾಗಿದ್ದು, ಸುಸ್ಥಿರ ಪರಿಹಾರ ಒದಗಿಸಲು ಸಂಶೋಧನೆ ಅಗತ್ಯವಿದೆ ಎಂದು ತಿಳಿಸಿದರು.

ಪ್ರಾಂಶುಪಾಲ ಡಾ.ಕೆ.ಎನ್. ಸುಬ್ರಮಣ್ಯಂ, ಉಪ ಪ್ರಾಂಶುಪಾಲರಾದ ಡಾ.ಕೆ.ಎಸ್.ಗೀತಾ, ಡಾ.ದೀಪಾ ಶಣೈ ಮತ್ತಿತರರು ಉಪಸ್ಥಿತರಿದ್ದರು.